**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**182/2016**

ಸಿ.ಡಬ್ಲ್ಯೂ-18 ಪಿ.ಡಬ್ಲ್ಯೂ-8

| | | |
|---|---|---|
| ಹೆಸರು | ಃ | ಸಂದರ್ಶಿ ಪಾಲ್ |
| ತಂದೆಃಗಂಡ | ಃ | ಬಿಷ್ಣು ಚಂದ್ರಪಾಲ್ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | : | ಎಸ.ಬಿ.ಐ. ಮ್ಯಾನೇಜರ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ05.02.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ಜನೆವರಿ-2011 ರಿಂದ 2015 ರ ವರೆಗೆ ಕಾರ್ಯ ನಿರ್ವಹಿಸಿರುತ್ತೇನೆ.

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 3, 19, 20, 27 ಪರಿಚಯ ಇರುತ್ತಾರೆ. ಉಳಿದವರ ಪರಿಚಯ ಇರುವುದಿಲ್ಲ. ಅಕ್ಟೋಬರ 2012 ರಂದು ನಮ್ಮ ಬ್ಯಾಂಕಿನಲ್ಲಿ ದರೋಡೆ ಆಗಿರುತ್ತದೆ. ನಾವು ಹಿಂದಿನ ದಿನ ಬ್ಯಾಂಕ ಮುಚ್ಚಿ ಹೋಗಿದ್ದು ಮರುದಿನ ಬಂದು ನೋಡಿದಾಗ ಬ್ಯಾಂಕಿನ ಹಿಂದಿನ ಬಾಗಿಲು ತೆಗೆದಿತ್ತು. ಬ್ಯಾಂಕಿನ ಸ್ಟ್ರಾಂಗ ರೂಮ್ ಒಂದು ವೃತ್ತಾಕಾರದಲ್ಲಿ ಕಟ್ ಮಾಡಲಾಗಿ ಒಳಗಿನ ಹಣ ಹಾಗೂ ಬಂಗಾರ ಕಳ್ಳತನ ಆಗಿತ್ತು. ನಾನು ಬ್ಯಾಂಕಿಗೆ ಹೋಗುವವರೆಗೂ ಪೋಲಿಸರು ಬಂದಿದ್ದರು. ತದನಂತರ 2-3 ದಿನಗಳ ಕಾಲ ಬ್ಯಾಂಕ ಬಂದ ಮಾಡಲಾಗಿತ್ತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನಮ್ಮ ಬ್ಯಾಂಕಿನ ಒಟ್ಟು ರೂ.46,40,392/- ಗಳು ಕಳ್ಳತನವಾಗಿದ್ದವು ಎಂದರೆ ಸರಿ. 4500/- ಗ್ರಾಂ ಬಂಗಾರ ಕಳ್ಳತನವಾಗಿತ್ತು ಎಂದರೆ ಸರಿ. ಎರಡು ಸೇರಿ ಒಟ್ಟು ರೂ.1,78,40,392/- ಕಳ್ಳತನವಾಗಿತ್ತು ಎಂದರೆ ಸರಿ. ನಾನು ನಮ್ಮ ಮ್ಯಾನೇಜರ ಹಾಗೂ ನಮ್ಮ ಸಿಬ್ಬಂದಿಗಳು ಸಿಪಿಐರವರ ಮುಂದೆ ಹೋಗಿದ್ದೇವು ಎಂದರೆ ಸರಿ. ನನ್ನ ಸಮಕ್ಷಮ ಬಂಗಾರ ಹಣ ಹಾಗೂ ಒಂದು ಟಾಟಾ ಸುಮೋ ವಾಹನ ಜಪ್ತಿಮಾಡಿಕೊಂಡರು ಎಂದರೆ ಸರಿ. ಎಲ್ಲಾ ಹಣವನ್ನು ಹಾಗೂ ಬಂಗಾರವನ್ನು ಆರೋಪಿತರು ಹಾಜರುಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ದಿ.14.11.2013 ರಂದು ನನಗೆ ನಮ್ಮ ಸಿಬ್ಬಂದಿಗಳಿಗೆ ಸಿಪಿಐರವರು ಎಂ.ಬಿ.ನಗರ ಪೋಲಿಸ ಠಾಣೆಗೆ ಕರೆಯಿಸಿದ್ದರು ಎಂದರೆ ಸರಿ. ಸಿಪಿಐರವರು ಆರೋಪಿತರೇ ಹಣ ಹಾಗೂ ಬಂಗಾರವನ್ನು ಕದ್ದಿರುತ್ತಾರೆ ಎಂದು ಜರೋಪಿತರನ್ನು ತೋರಿಸಿ ತಿಳಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನಾನು ಪೋಲಿಸರ ಎದುರು ಹೇಳಿಕೆ ಹಾಗೂ ಪೂರವಣಿ ಹೇಳಿಕೆ ಹಾಗೂ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಐ.ಎಸ್. ಮತ್ತು ಬಿ.ಜಿ.ಬಿ. ವಕೀಲರಿಂದಃ**

ನನಗೆ ಕನ್ನಡ ಅರ್ಥವಾಗುತ್ತೇ, ನಾನು ಕ್ಲಾರಿಕಲ್ ಕೆಲಸ ಮಾಡುತ್ತಿದ್ದೇನು. ನಾನು **2011** ಜನವರಿಯಿಂದ ಅಕ್ಟೊಬರ-ನವೆಂಬರ **2015** ರ ವರೆಗೆ ಕಾರ್ಯ ನಿರ್ವಹಿಸಿದ್ದೆ. ನಾನು ಹೆಡ್ ಕ್ಯಾಶಿಯರ ಇರಲಿಲ್ಲ. ಪ್ರಕರಣದಲ್ಲಿ ನನ್ನ ಹೇಳಿಕೆಗಳು ಕನ್ನಡದಲ್ಲಿದ್ದು ಕನ್ನಡ ಓದಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನಮ್ಮ ಬ್ಯಾಂಕ ಬೆಳಗ್ಗೆ **10.30** ರಿಂದ ಸಂಜೆ **5.30** ರ ವರೆಗೆ ಕಾರ್ಯನಿರ್ವಹಿಸುತ್ತದೆ. ಘಟನೆ ನಡೆದ ಹಿಂದಿನ ದಿನ ನಮ್ಮ ಬ್ಯಾಂಕಿನ ಟ್ರಾನಸ್ಯಾಕ್ಷನ (Transaction) ಎಷ್ಟು ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಮ್ಯಾನೇಜರ ಹೇಳಿದ ನಂತರವೇ ಹಣ ಎಷ್ಟು ಕಳ್ಳತನ ಆಗಿದೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ನನಗೆ ಬ್ಯಾಂಕಿಗೆ ಹೋಗುವವರೆಗೂ ಕಳ್ಳತನವ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸರಿ. ನಾನು **10.15** ಕ್ಕೆ ಬ್ಯಾಂಕಿಗೆ ಹೋಗಿರುತ್ತೇನೆ. ನಾನು ಹೋದಾಗ ಪೋಲಿಸರು ಹಾಗೂ ಉಳಿದ ಸಿಬ್ಬಂದಿಗಳು ಇದ್ದರು. ನಾನು ಬ್ಯಾಂಕಿನ ಒಳಗೆ ಹೋಗಿರುವುದಿಲ್ಲ. ಬ್ಯಾಂಕಿನ ಒಳಗೆ ಮ್ಯಾನೇಜರ ಹಾಗೂ ಪೊಲಿಸರ ಮದ್ಯ ಏನಾಗುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮ್ಯಾನೇಜರ ಹೇಳುವವರೆಗೂ ಬ್ಯಾಂಕಿನಲ್ಲಿ ಎಷ್ಟು ಬಂಗಾರ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಾನು ಇಡೀ ದಿನ ಬ್ಯಾಂಕಿನ ಹೊರಗೆ ನಿಂತಿದ್ದೇನು. ನಮ್ಮ ಮ್ಯಾನೆಜರ ಅಂದು ನನ್ನನು ಕರೆದು ಮಾತನಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬ್ಯಾಂಕ ಅವಧಿಯ ನಂತರ ಬೇರೆ ಎಲ್ಲಿಯೂ ಹೋಗಿರುವುದಿಲ್ಲ. ಮ್ಯಾನೇಜರ ನನ್ನನ್ನು ಪ್ರತ್ಯೇಕವಾಗಿ ಕರೆದು ಘಟನೆಯ ಬಗ್ಗೆ ಮಾತನಾಡಿರುವುದಿಲ್ಲ. ನಾನು ನನ್ನ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ. ಘಟನೆಯ ನಂತರ ಈ ಪ್ರಕರಣದ ಬಗ್ಗೆ ನನ್ನನ್ನು ಯಾರು ಕರೆದಿರುವುದಿಲ್ಲ. ನಾನು, ಚಾಸಾ-27 ರೊಂದಿಗೆ ಒಂದು ಬಾರಿ ಆಳಂದಕ್ಕೆ ಬಂದಾಗ ಜಪ್ತಿಪಡಿಸಿಕೊಂಡ ಬಂಗಾರ ಹಾಗೂ ಹಣವನ್ನು ತೋರಿಸಿದ್ದರು. ಬಂಗಾರ ಹಾಗೂ ಹಣ ಎಲ್ಲಿ ಜಪ್ತಿಪಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಟಾಟಾ ಸುಮೊ ವಾಹನದ ಸಂಖ್ಯೆ ಹಾಗೂ ಬಣ್ಣ ನನಗೆ ಗೊತ್ತಿಲ್ಲ.

ನಮ್ಮ ಬ್ಯಾಂಕ ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಳ್ಳತನ ಯಾರು ಮಾಡಿರುತ್ತಾರೆ ಎಂದು ನಮಗೆ ತೋರಿಸಿರುವುದಿಲ್ಲ ಎಂದರೆ ಸರಿ.

ಅಕ್ಟೋಬರ 2012 ರಂದು ನಮ್ಮ ಬ್ಯಾಂಕಿನಲ್ಲಿ ದರೋಡೆ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಿಂದಿನ ದಿನ ಬ್ಯಾಂಕ ಮುಚ್ಚಿ ಹೋಗಿದ್ದು ಮರುದಿನ ಬಂದು ನೋಡಿದಾಗ ಬ್ಯಾಂಕಿನ ಹಿಂದಿನ ಬಾಗಿಲು ತೆಗೆದಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನ ಸ್ಟ್ರಾಂಗ ರೂಮ್ ಒಂದು ವೃತ್ತಾಕಾರದಲ್ಲಿ ಕಟ್ ಮಾಡಲಾಗಿ ಒಳಗಿನ ಹಣ ಹಾಗೂ ಬಂಗಾರ ಕಳ್ಳತನ ಆಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿಗೆ ಹೋಗುವವರೆಗೂ ಪೋಲಿಸರು ಬಂದಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತದನಂತರ 2-3 ದಿನಗಳ ಕಾಲ ಬ್ಯಾಂಕ ಬಂದ ಮಾಡಲಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಬ್ಯಾಂಕಿನ ಒಟ್ಟು ರೂ.46,40,392/- ಗಳು ಕಳ್ಳತನವಾಗಿದ್ದವು ಎಂದರೆ ಸರಿ. 4500/- ಗ್ರಾಂ ಬಂಗಾರ ಕಳ್ಳತನವಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ಸೇರಿ ಒಟ್ಟು ರೂ.1,78,40,392/- ಕಳ್ಳತನವಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಮ್ಯಾನೇಜರ ಹಾಗೂ ನಮ್ಮ ಸಿಬ್ಬಂದಿಗಳು ಸಿಪಿಐರವರ ಮುಂದೆ ಹೋಗಿದ್ದೇವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಬಂಗಾರ ಹಣ ಹಾಗೂ ಒಂದು ಟಾಟಾ ಸುಮೋ ವಾಹನ ಜಪ್ತಿಮಾಡಿಕೊಂಡರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಹಣವನ್ನು ಹಾಗೂ ಬಂಗಾರವನ್ನು ಆರೋಪಿತರು ಹಾಜರುಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.14.11.2013 ರಂದು ನನಗೆ ನಮ್ಮ ಸಿಬ್ಬಂದಿಗಳಿಗೆ ಸಿಪಿಐರವರು ಎಂ.ಬಿ.ನಗರ ಪೋಲಿಸ ಠಾಣೆಗೆ ಕರೆಯಿಸಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸಿಪಿಐರವರು ಆರೋಪಿತರೇ ಹಣ ಹಾಗೂ ಬಂಗಾರವನ್ನು ಕದ್ದಿರುತ್ತಾರೆ ಎಂದು ಆರೋಪಿತರನ್ನು ತೋರಿಸಿ ತಿಳಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಎದುರು ಹೇಳಿಕೆ ಹಾಗೂ ಪೂರವಣಿ ಹೇಳಿಕೆ ಹಾಗೂ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು,
ಆಳಂದ